# ಫೇಸ್‌ಬುಕ್‌ನಲ್ಲಿ ಕೊರೊನಾ ಹೆಲ್ಪ್‌ಡೆಸ್ಕ್

■ **ಶಶಿಕುಮಾರ್ ಸಿ.**

ಕೊರೊನಾ ವೈರಸ್‌ಗಿಂತ ಮಿಗಿಲಾಗಿ ಅದರ ಕುರಿತ ಇಲ್ಲಸಲ್ಲದ ಸುದ್ದಿಗಳೇ ವಿಶ್ವದಾದ್ಯಂತ ಹೆಚ್ಚು ಸದ್ದು ಮಾಡುತ್ತಿರುವುದೂ ಆ ಗಾಳಿಸುದ್ದಿಗಳು ಜನರನ್ನು ಆತಂಕಕ್ಕೀಡು ಮಾಡಿರುವುದು ಸತ್ಯ. ವಿವಿಧ ಸ್ವರೂಪದ ಗಾಳಿಸುದ್ದಿಗಳು ಹರಡಲು ಸಾಮಾಜಿಕ ಜಾಲತಾಣಗಳೇ ಮುಖ್ಯ ವೇದಿಕೆಯಾಗಿವೆ. ಅದರಲ್ಲೂ ಬಹುದೊಡ್ಡ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಂತೂ ಸುಳ್ಳು ಸುದ್ದಿಗಳನ್ನು ದೊಡ್ಡ ಪ್ರಮಾಣದಲ್ಲೇ ಹರಡಲಾಗುತ್ತಿದೆ.

ಅತಿರಂಜಿತ ಸುದ್ದಿಗಳ ಬಗ್ಗೆ ಎಚ್ಚೆತ್ತುಕೊಂಡಿರುವ ಫೇಸ್‌ಬುಕ್, ಕೊರೊನಾ ವೈರಸ್ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡುವುದಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳುತ್ತಿದೆ. ಅದಕ್ಕಾಗಿ 'ಕೊರೊನಾ ಹೆಲ್ಪ್‌ಡೆಸ್ಕ್' ತೆರೆದಿದೆ. ಮಾರಕ ವೈರಸ್ ಕುರಿತು ಹಬ್ಬುತ್ತಿರುವ ಗಾಳಿ ಸುದ್ದಿ ಮತ್ತು ವದಂತಿಗೆ ತೆರೆ ಎಳೆಯುವ ಸಲುವಾಗಿ ಸರ್ಕಾರ ಮತ್ತು ಆರೋಗ್ಯ ಸಚಿವಾಲಯದ ಜೊತೆ ಫೇಸ್‌ಬುಕ್ ಕೈಜೋಡಿಸಿದೆ.




ಫೇಸ್‌ಬುಕ್ ಮೆಸೆಂಜರ್ ಮೂಲಕ ಜನರು ಕೊರೊನಾ ವೈರಸ್ ಕುರಿತು ತಮಗಿರುವ ಸಂಶಯ ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ಮೂಲಕ ಅಧಿಕೃತವಾಗಿ ಪಡೆದ ಅಂಕಿಅಂಶಗಳನ್ನು ಮಾತ್ರ ಇದು ತನ್ನ ಬಳಕೆದಾರರಿಗೆ ಒದಗಿಸಲಿದ್ದು, ಆ ಮೂಲಕ ಕೊರೊನಾ ವೈರಸ್ ಜಾಗೃತಿಯನ್ನು ಮಾಡುತ್ತಿದೆ. ಜೊತೆಗೆ ಫೇಸ್‌ಬುಕ್ ಮೆಸೆಂಜರ್, ಮೈ ಗವರ್ನಮೆಂಟ್ ಇಂಡಿಯಾ (MyGovIndia) ಹೆಲ್ಪ್‌ಡೆಸ್ಕ್ ಚಾಟ್‌ಬಾಟ್ ಮೂಲಕ ಪಡೆದ ಅಧಿಕೃತ ಮಾಹಿತಿಯನ್ನು ಒದಗಿಸಲಿದೆ.

### ಮಾಹಿತಿ ಪಡೆಯುವುದು ಹೇಗೆ?

ಫೇಸ್‌ಬುಕ್ ತೆರೆದು ಬಳಕೆದಾರರು MyGovIndia ಪೇಜ್‌ಗೆ ಭೇಟಿ ನೀಡಬೇಕು. ಬಳಿಕ ಅಲ್ಲಿ ಕಾಣುವ ಮೆಸೆಂಜರ್ ಲಿಂಕ್ ಅನ್ನು ಕ್ಲಿಕ್ ಮಾಡಿದರೆ ಚಾಟ್ ಬಾಕ್ಸ್ ತೆರೆದುಕೊಳ್ಳುತ್ತದೆ. ಅದರಲ್ಲಿ ಕಾಣುವ ಸೂಚನೆಯ ಅನುಸಾರ ನಿಮಗೆ ಬೇಕಾದ ಅಗತ್ಯ ಮತ್ತು ನಿಖರ ಮಾಹಿತಿಯನ್ನು ಪಡೆದುಕೊಳ್ಳಬಹುದು. ■

# ಕೊರೊನಾಗೆ ವಾಟ್ಸ್‌ಆ್ಯಪ್ ಚಾಟ್ ಮದ್ದು

ಕೊರೊನಾ ವೈರಸ್ ಹೇಗೆ ಹರಡುತ್ತದೆ, ಆ ರೋಗದ ಸೋಂಕಿನ ಹಾವಳಿ ಮತ್ತು ಅದರಿಂದಾಗುವ ಪರಿಣಾಮ, ರೋಗ ಲಕ್ಷಣ ಹಾಗೂ ಮುಂಜಾಗ್ರತಾ ಕ್ರಮಗಳ ಕುರಿತು ತಿಳಿದುಕೊಳ್ಳಲು ಕೇಂದ್ರ ಸರ್ಕಾರ ಮತ್ತು ಮುಂಬೈ ಮೂಲದ ಹ್ಯಾಪ್ಟಿಕ್ ಕಂಪನಿಯು ಪ್ರತ್ಯೇಕವಾಗಿ ವಾಟ್ಸ್‌ಆ್ಯಪ್ ಮೂಲಕ ಚಾಟ್‌ಬಾಟ್ ಒಂದನ್ನು ಆರಂಭಿಸಿದೆ.

ಮೈ ಗವರ್ನಮೆಂಟ್ ಇಂಡಿಯಾ (MyGovIndia) +919013151515 ಮತ್ತು ಹ್ಯಾಪ್ಟಿಕ್ ಕಂಪನಿಯ +91 93213 98773 ಈ ವಾಟ್ಸ್‌ಆ್ಯಪ್ ಮೊಬೈಲ್ ನಂಬರ್‌ಗಳನ್ನು ಸಾರ್ವಜನಿಕರು ತಮ್ಮ ಮೊಬೈಲ್‌ಗಳಲ್ಲಿ ಸೇವ್ ಮಾಡಿಕೊಂಡು ಆ ನಂಬರ್‌ಗೆ ಹಾಯ್ ಎಂದು ಮೆಸೇಜ್ ಕಳುಹಿಸಿದರೆ ಸಾಕು, ತಕ್ಷಣವೇ ಅಲ್ಲಿ ನಿಮಗೆ ಪ್ರತಿಕ್ರಿಯೆ ಲಭ್ಯವಾಗುತ್ತದೆ. ಇದರಿಂದ ವಾಟ್ಸ್‌ಆ್ಯಪ್‌ನಲ್ಲೇ ಕೊರೊನಾ ವೈರಸ್ ಕುರಿತು ಅಧಿಕೃತ ಮಾಹಿತಿ ಪಡೆದುಕೊಳ್ಳಬಹುದು. ಕೊರೊನಾ ವೈರಸ್ ಹೆಲ್ಪ್‌ಡೆಸ್ಕ್‌ಗೆ ವಾಟ್ಸ್‌ಆ್ಯಪ್ ಮೂಲಕ ಮೆಸೇಜ್ ಮಾಡಿ, ಅದರ ಬಗ್ಗೆ ಸವಿವರವಾದ ಮಾಹಿತಿಯನ್ನು ಪಡೆಯಬಹುದು.




### ಕೊರೊನಾ ವೈರಸ್ ಹೆಲ್ಪ್‌ಡೆಸ್ಕ್

ವೈರಸ್ ಕುರಿತ ಜಾಗೃತಿ, ಮಾಹಿತಿ ಪಡೆಯಲು ಹ್ಯಾಪ್ಟಿಕ್ ಸಹಾಯವಾಣಿಯನ್ನು ಬಳಸಬಹುದು. ಕೊರೊನಾ ಹೇಗೆ ಹರಡುತ್ತದೆ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳು, ಆರೋಗ್ಯ ಸಚಿವಾಲಯದ ಸೂಚನೆ, ಪರಿಹಾರ ಕ್ರಮಗಳ ಕುರಿತು ವಾಟ್ಸಪ್‌ನಲ್ಲಿ ಅಧಿಕೃತ ಮಾಹಿತಿ ದೊರೆಯುತ್ತದೆ.

### ಬಳಕೆ ಹೇಗೆ?

ದೇಶದ ಜನರು ನಂಬರ್‌ಗೆ ವಾಟ್ಸ್‌ಆ್ಯಪ್‌ನಲ್ಲಿ ಹಾಯ್ ಎಂದು ಮೆಸೇಜ್ ಕಳುಹಿಸಿದರೆ ಪ್ರತಿಕ್ರಿಯೆ ಲಭ್ಯವಾಗುತ್ತದೆ. ಹಾಯ್ ಎಂದು ಸಂದೇಶ ಕಳುಹಿಸಿದ ಕೂಡಲೇ ಕೆಲವೊಂದು ಸಿದ್ಧ ಪ್ರಶ್ನೆಗಳು ಹಾಗೂ ಅವುಗಳಿಗೆ ಉತ್ತರಗಳೂ ಲಭ್ಯವಾಗುತ್ತವೆ. ಜೊತೆಗೆ ಇತರರು ಕೇಳಿದ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರವೂ ಲಭ್ಯವಾಗುತ್ತದೆ. ಅದರ ಹೊರತಾಗಿಯೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜನರು ಸಂದೇಶ ಟೈಪ್ ಮಾಡಿ ಕಳುಹಿಸಿದರೆ, ಚಾಟ್‌ಬಾಟ್ ಉತ್ತರ ನೀಡುತ್ತದೆ. ಇಲ್ಲಿನ ಮಾಹಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ, ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿರುವ ಅಧಿಕೃತ ಮಾಹಿತಿಯನ್ನು ಬಳಸಿಕೊಂಡು ವಾಟ್ಸ್‌ಆ್ಯಪ್ ಚಾಟ್ ಉತ್ತರ ನೀಡುತ್ತದೆ. ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ತಪ್ಪು ಮಾಹಿತಿಯನ್ನು ಹೋಗಲಾಡಿಸುವುದು ಇದರ ಉದ್ದೇಶವಾಗಿದೆ. ■